RNU AIR DHARWAD

AUGUST 28, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಆಕಾಶವಾಣಿಯ ನಮ್ಮ ಆತ್ಮೀಯ ಕೇಳುಗರಿಗೆಲ್ಲ, ರಕ್ಷಾ ಬಂಧನ ಹಾಗೂ ಸಂಸ್ಕೃತ ದಿನಾಚರಣೆಯ, ಹಾರ್ದಿಕ ಶುಭಾಶಯಗಳು.**

<><><>

**ಮುಖ್ಯಾಂಶಗಳು**

<><><>

- **ಗ್ರಾಮೀಣ ಜಲ ಆಸ್ತಿಗಳ** ವೈಜ್ಞಾನಿಕ ನಿರ್ವಹಣೆಗೆ, ಜಿ.ಐ.ಎಸ್. ಆಧಾರಿತ, ವೆಬ್ ಅಪ್ಲಿಕೇಷನ್, ಜಾರಿಗೆ.
- **ಎಲಿವೇಟ್ ಕರ್ನಾಟಕ** ಮತ್ತು ಲೀಪ್ ಯೋಜನೆ; ಕಲ್ಯಾಣ ಕರ್ನಾಟಕದ ಹದಿನೆಂಟು ನವೋದ್ಯಮಿಗಳಿಗೆ ಲಾಭ.
- **ವಿಜಯಪುರದ 'ಮಡಗ್ಯಾಳ' ಕುರಿಗೆ,** ರಾಷ್ಟ್ರೀಯ ತಳಿ ಮಾನ್ಯತೆ.
- **ಇಂದು, ಶ್ರಾವಣ ಮಾಸದ,** ನೂಲು ಹುಣ್ಣಿಮೆ; 'ರಕ್ಷಾ ಬಂಧನ' ಸಂಭ್ರಮ.

<><><>

**ಈಗ ವಾರ್ತೆಗಳ ವಿವರ**

<><><>

**ಗ್ರಾಮೀಣ ಜಲ ಆಸ್ತಿಗಳ** ವೈಜ್ಞಾನಿಕ ನಿರ್ವಹಣೆಗೆ, ಭೌಗೋಳಿಕ ಮಾಹಿತಿ ವ್ಯವಸ್ಥೆ ಆಧಾರಿತ, ಮೊಬೈಲ್ ಮತ್ತು ವೆಬ್ ಅಪ್ಲಿಕೇಷನ್, ಕರ್ನಾಟಕ ದೂರ ಸಂವೇದಿ ಆನ್ವಯಿಕ ಕೇಂದ್ರದ ಸಹಯೋಗದಲ್ಲಿ, ಅನುಷ್ಠಾನಗೊಳಿಸಲಾಗಿದೆ. ಎಲ್ಲ ಗ್ರಾಮೀಣ ಜಲ ಆಸ್ತಿಗಳನ್ನು, ಜಿಯೋ ಟ್ಯಾಗ್ ಮಾಡಿ, ಪಾರದರ್ಶಕತೆ ತರಲಾಗುವುದು, ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ, ಈಶ್ವರ ಖಂಡ್ರೆ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ರಾಜ್ಯದಲ್ಲಿ 3 ಲಕ್ಷಕ್ಕೂ ಅಧಿಕ, ಜಲ ಆಸ್ತಿಗಳಿದ್ದು, ಸೆಪ್ಟೆಂಬರ್ ಅಂತ್ಯದೊಳಗೆ, ಡಿಜಟಲೀಕರಿಸಲಾಗುವುದು. ಮೊದಲ ಹಂತದಲ್ಲಿ, 70 ಸಾವಿರಕ್ಕೂ ಅಧಿಕ ಜಲ ಸ್ವತ್ತುಗಳನ್ನು, ದಾಖಲೀಕರಿಸಲಾಗಿದೆ ಎಂದರು.

<><><>

**ಕಲಬುರಗಿ ಸೇರಿದಂತೆ, ಕಲ್ಯಾಣ ಕರ್ನಾಟಕ ಭಾಗದಲ್ಲಿ** ಹೂಡಿಕೆಗಾಗಿ, ರಾಜ್ಯ ಸರ್ಕಾರ, ಎಲಿವೇಟ್ ಕರ್ನಾಟಕ ಮತ್ತು ಲೀಪ್ ಯೋಜನೆ ಜಾರಿಗೊಳಿಸಿದೆ ಎಂದು, ಜಿಲ್ಲಾಧಿಕಾರಿ ಇಕ್ರಂ ಶರೀಫ ತಿಳಿಸಿದ್ದಾರೆ. ಗಾಜೀಪುರದ, ಕೃಷಿಕಲ್ಪ ಕಚೇರಿಯಲ್ಲಿ, ಸಿರಿ ಧಾನ್ಯಗಳ ಮೌಲ್ಯ ವರ್ಧಿತ ಉತ್ಪನ್ನಗಳನ್ನು ಬಿಡುಗಡೆಗೊಳಿಸಿ, ಅವರು ಮಾತನಾಡಿದರು. ಎಲಿವೇಟ್ ಕರ್ನಾಟಕ ಯೋಜನೆ ಅಡಿ, ಯುವ ನವೋದ್ಯಮಿಗಳಿಗೆ, ಸ್ಟಾರ್ಟ್ಅಪ್ ಇನ್‌ಕ್ಯುಬೇಷನ್ ಅಡಿ, ಸಹಾಯಧನ ನೀಡಲಾಗುತ್ತಿದೆ ಎಂದರು. ಕೃಷಿಕಲ್ಪ ಸಂಸ್ಥೆಯ ಸಿ.ಇ.ಓ. ಸಿ.ಎಂ. ಪಾಟೀಲ ಮಾತನಾಡಿ, ಒಟ್ಟು 25 ಜನರ ಪೈಕಿ, ಕಲ್ಯಾಣ ಕರ್ನಾಟಕದ 18 ನವೋದ್ಯಮಿಗಳಿಗೆ, ತಲಾ 50 ಲಕ್ಷ ರೂಪಾಯಿ ಸಹಾಯಧನ ರಾಜ್ಯ ಸರ್ಕಾರ ನೀಡಿದೆ ಎಂದರು.

<><><>

**ಸರ್ಕಾರಿ ಭೂಮಿ ಮತ್ತು ಸಾರ್ವಜನಿಕ ಆಸ್ತಿಗಳ,** ಕಬಳಿಕೆ ಮತ್ತು ಅಕ್ರಮ ಬಳಕೆಯ ಬಗ್ಗೆ, ಉಪ ಲೋಕಾಯುಕ್ತ, ನ್ಯಾಯಮೂರ್ತಿ ಬಿ. ವೀರಪ್ಪ ತೀವ್ರ ಕಳವಳ ವ್ಯಕ್ತ ಪಡಿಸಿದ್ದಾರೆ. ಮಂಡ್ಯ ಜಿಲ್ಲೆ, ಮದ್ದೂರಿನಲ್ಲಿ, ತಾಲೂಕಿನ ಬಾಕಿ ಪ್ರಕರಣಗಳ ವಿಚಾರಣೆ ಕೈಗೊಂಡು, ಅವರು ಮಾತನಾಡಿದರು. ಸರ್ಕಾರಿ ಜಮೀನಿನ ಅಕ್ರಮ ಮಂಜೂರಾತಿ, ಸುಳ್ಳು ದಾಖಲೆಗಳು, ಕಾನೂನುಬಾಹಿರವಾಗಿ, ಸರ್ಕಾರಿ ಜಮೀನು ಕಬಳಿಸುವ ಪ್ರಯತ್ನಗಳಿಗೆ, ಕಾನೂನುಬದ್ಧ ಕ್ರಮ ಕೈಗೊಳ್ಳಲಾಗುವುದು ಎಂದು, ಸ್ಪಷ್ಟ ಪಡಿಸಿದರು.

<><><>

**ಧಾರವಾಡ ತಾಲೂಕು, ಶಿವಳ್ಳಿ ಗ್ರಾಮದಲ್ಲಿ ಸ್ಥಾಪನೆಯಾಗಲಿದ್ದ,** ಜೈವಿಕ ಅನಿಲ ಘಟಕವನ್ನು ಸ್ಥಳಾಂತರಿಸಿ, ಹುಬ್ಬಳ್ಳಿ–ಧಾರವಾಡ ಮಹಾನಗರ ಸಮೀಪದಲ್ಲಿ ಸ್ಥಾಪಿಸುವ ಕುರಿತು, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಮಹಾಪೌರರು ಹಾಗೂ ಆಯುಕ್ತರೊಂದಿಗೆ ಚರ್ಚಿಸಿದ್ದಾರೆ. ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಒಡೆತನದ ಜಾಗೆಯಲ್ಲಿ, ಜೈವಿಕ ಅನಿಲ ಘಟಕ ಪ್ರಾರಂಭಿಸಲು, ಮಹಾಪೌರರು ಮತ್ತು ಆಯುಕ್ತರು ಸಮ್ಮತಿಸಿದ್ದಾರೆ ಎಂದು, ಸಾಮಾಜಿಕ ಮಾಧ್ಯಮ ಫೇಸ್‌ಬುಕ್‌ನಲ್ಲಿ ತಿಳಿಸಿದ್ದಾರೆ.

<><><>

**ವಿಜಯಪುರದ 'ಮೌಳಿ' ತಳಿ ಹಾಗೂ ಮಹಾರಾಷ್ಟ್ರ** ರಾಜ್ಯದ ಸಾಂಗ್ಲಿ ಜಿಲ್ಲೆಯಲ್ಲಿ, **'ಮಡಗ್ಯಾಳ'** ಎಂದು ಕರೆಯಲ್ಪಡುವ, ಅಲೆಮಾರಿ ಕುರಿ ತಳಿಗೆ, ರಾಷ್ಟ್ರೀಯ ತಳಿ ಎಂಬ, ಮಾನ್ಯತೆ ದೊರೆತಿದೆ. ಹರ್ಯಾಣಾದ ಕರ್ನಾಲ್‌ದಲ್ಲಿರುವ, ಕೇಂದ್ರೀಯ ಪ್ರಾಣಿ ಅನುವಂಶೀಯ ಸಂಪನ್ಮೂಲ ಬ್ಯೂರೊ, ಹೊಸ ದಿಲ್ಲಿಯ ಭಾರತೀಯ ಕೃಷಿ ಸಂಶೋಧನಾ ಮಂಡಳಿ ಸಹಯೋಗದಲ್ಲಿ, ಕುರಿ ತಳಿ ನೋಂದಾಯಿಸಿ, ರಾಷ್ಟ್ರೀಯ ಮಾನ್ಯತೆ ನೀಡಿದೆ. ಬೀದರ, ಕಲಬುರ್ಗಿ, ಯಾದಗಿರಿ ಹಾಗೂ ತೆಲಂಗಾಣ ರಾಜ್ಯದಲ್ಲಿ, ಅಕ್ಟೋಬರ್ ನಿಂದ ಮೇ ತಿಂಗಳ ವರೆಗೆ, ಮೂರು ನೂರು ಕಿಲೋ ಮೀಟರ್ ವರೆಗೆ ಅಲೆದು, ವಾಪಸಾಗುವ, ಮಡಗ್ಯಾಳ ಕುರಿ, ರೋಮನ್ ನೋಸ್‌ಗೆ ಹೆಸರುವಾಸಿ.

<><><>

**ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ,** ಹೆಚ್ಚಿನ ಮಾಹಿತಿ ನೀಡಿದ್ದಾರೆ, ತಳಿ ಸಂಶೋಧನೆಯ ರೂವಾರಿ ಹಾಗೂ ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾಕ್ಟರ್ ವಿಶ್ವನಾಥ ಕುಲಕರ್ಣಿ.

<><><>

**ಡಾ. ವಿಶ್ವನಾಥ ಕುಲಕರ್ಣಿ ಧ್ವನಿ 60 ಸೆಕೆಂದುಗಳು**

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(37 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಶ್ರಾವಣ ಮಾಸದ ವಿಶೇಷ ಹಬ್ಬ,** ನೂಲು ಹುಣ್ಣಿಮೆ. ತನ್ನಿಮಿತ್ತ ಇಂದು, 'ರಕ್ಷಾ ಬಂಧನ'. ರಾಷ್ಟ್ರ ಕವಿ ರವಿಂದ್ರನಾಥ ಟ್ಯಾಗೋರ್, ರಾಖಿ, ಭ್ರಾತೃತ್ವ, ಏಕತೆ ಮತ್ತು ಹಿಂದೂ–ಮುಸ್ಲಿಂ ಬಂಧುಗಳ, ಪ್ರೀತಿ ಹಾಗೂ ಬಂಧುತ್ವದ ಸಂಕೇತ, ಎಂದಿದ್ದಾರೆ. ಬಂಗಾಳದ ವಿಭಜನೆಯ ಸಮಯದಲ್ಲಿ, ರಕ್ಷಾಬಂಧನದ ಮೂಲಕ, ಹಿಂದೂ–ಮುಸ್ಲಿಂಮರು ಏಕತೆಯಿಂದ, ಬ್ರಿಟಿಷರ ವಿರುದ್ಧ ಹೋರಾಡಲಿ ಎಂಬುದು, ಅವರ ಆಶಯವಾಗಿತ್ತು.

<><><>

**'ವಸುಧೈವ ಕುಟುಂಬಕಮ್'** ಎಂಬ ಭಾವದೊಂದಿಗೆ, ಸಹೋದರಿಯರು, ತಮ್ಮ ಪವಿತ್ರ ಬಂಧದ ಸೂಚಕವಾಗಿ, ಸಹೋದರರಿಗೆ **'ರಾಖಿ'** ಕಟ್ಟಿ, ತಿಲಕದೊಂದಿಗೆ, ಆತ್ಮಜ್ಯೋತಿಯ ಭಾವವನ್ನು ಪ್ರಜ್ವಲಿಸುತ್ತಾರೆ.

<><><>

**ಬ್ರಹ್ಮ ಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ,** ರಾಷ್ಟ್ರೀಯ ಸ್ವಯಂಸೇವಕ ಸಂಘ ಸೇರಿದಂತೆ, ಅನೇಕ ಸಂಘಟನೆಗಳು ಇಂದು, ಸಾಂಘಿಕ ರಕ್ಷಾ ಬಂಧನ ಕಾರ್ಯಕ್ರಮ ಆಯೋಜಿಸಿವೆ. ರಾಷ್ಟ್ರಪತಿ ದ್ರೌಪದಿ ಮುರ್ಮು, ನಾಡಿನ ಜನತೆಗೆ, ರಕ್ಷಾ ಬಂಧನದ ಹಾರ್ದಿಕ ಶುಭಾಶಯ ಕೋರಿದ್ದಾರೆ.

<><><>

**ನಾಡಿನ ವಿವಿಧೆಡೆ ಇಂದು,** ಶಿವಶರಣ ಶ್ರೀ ನುಲಿಯ ಚಂದಯ್ಯ ಹಾಗೂ ಬ್ರಹ್ಮರ್ಷಿ ನಾರಾಯಣಗುರುಗಳ ಜಯಂತ್ಯುತ್ಸವವನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದೆ.

<><><>

**ಉತ್ತರಕನ್ನಡ ಜಿಲ್ಲೆ, ಅಂಕೋಲಾ ತಾಲೂಕು,** ಬಾಸಗೋಡ ಮೂಲದ, ಅಭಿನವ್ ಉದಯ ನಾಯಕ, ಪ್ರಸ್ತುತ ಕೋಲಾರದ ಜೆ.ಎಸ್.ಎಸ್. ಪಬ್ಲಿಕ್ ಶಾಲೆಯಲ್ಲಿ, 10ನೇ ತರಗತಿ ಓದುತ್ತಿರುವ ವಿದ್ಯಾರ್ಥಿ. ಕೇಂದ್ರ ಶಿಕ್ಷಣ ಸಚಿವಾಲಯ, ಗುಜರಾತಿನ ವಾಡ್ ನಗರದಲ್ಲಿ ಆಯೋಜಿಸಿದ್ದ, ರಾಷ್ಟ್ರೀಯ ಅನುಭವಾತ್ಮಕ ಕಲಿಕಾ ಕಾರ್ಯಾಗಾರ, 'ಪ್ರೇರಣಾ' ದಲ್ಲಿ ಪಾಲ್ಗೊಳ್ಳಲು, ಕರ್ನಾಟಕದಿಂದ ಆಯ್ಕೆಯಾದ, ಏಕೈಕ ಬಾಲಕ ಅಭಿನವ್. ಅವರ ತಾಯಿ ಸುರೇಖಾ ಶಿಕ್ಷಕಿಯಾಗಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು,** ಅಭಿನವ್‌ಗೆ ಸ್ವತಃ ಪತ್ರ ಬರೆದು, 2047ರ ವಿಕಸಿತ ಭಾರತ ನಿರ್ಮಾಣದ, ಕನಸನ್ನು ನನಸು ಮಾಡುವಲ್ಲಿ, ಯುವ ಜನತೆಯೇ, ಚಾಲಕ ಶಕ್ತಿ ಎಂದು ಬಣ್ಣಿಸಿ, ಶುಭ ಹಾರೈಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಅಭಿನವ್ ನಾಯಕ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಅಭಿನವ್ ನಾಯಕ ಧ್ವನಿ 47 ಸೆಕೆಂದುಗಳು**

<><><>

**ನಿಧನ ವಾರ್ತೆ**

<><><>

**ಧಾರವಾಡ ಜಿಲ್ಲೆ, ನವಲಗುಂದ ವಿಧಾನಸಭಾಕ್ಷೇತ್ರದ,** ಮಾಜಿ ಶಾಸಕ ಡಾಕ್ಟರ್ ಆರ್.ಬಿ.ಶಿರಿಯಣ್ಣವರ, ಧಾರವಾಡದ ನಾಯಕನ ಹೂಲಿಕಟ್ಟಿಯ, ತೋಟದ ಮನೆಯಲ್ಲಿ, ನಿಧನರಾಗಿದ್ದಾರೆ. ಅವರಿಗೆ 83 ವರ್ಷ ವಯಸ್ಸಾಗಿತ್ತು. ನಾಯಕನ ಹೂಲಿಕಟ್ಟಿಯ ತೋಟದಲ್ಲಿ, ಇಂದು ಮಧ್ಯಾಹ್ನ 2 ಗಂಟೆಗೆ, ಪಾರ್ಥಿವ ಶರೀರದ ಅಂತ್ಯಕ್ರಿಯೆ ನಡೆಯಲಿದೆ ಎಂದು, ಕುಟುಂಬ ತಿಳಿಸಿದೆ.

<><><>

**ಸಂಕ್ಷಿಪ್ತ ಸುದ್ದಿಗಳು**

<><><>

**'ಮೇರಾ ಯುವ ಭಾರತ್'** ಆಯೋಜಿಸಿದ್ದ, 'ಖೇಲೋ ಇಂಡಿಯಾ; ಖೇಲ್ ಕಿ ಬಾತ್, ಪಿ.ಎಂ. ಕೆ ಸಾಥ್' ಸಂವಾದದಲ್ಲಿ, ರಾಜ್ಯದ 16 ಜಿಲ್ಲೆಗಳಿಂದ, ವಿದ್ಯಾರ್ಥಿಗಳು, ಕ್ರೀಡಾಪಟುಗಳು, ಪಾಲ್ಗೊಂಡಿದ್ದರು.

<><><>

**ನೇಪಾಳದಲ್ಲಿ ಸಂಭವಿಸಿದ** ದಿಢೀರ್ ಪ್ರವಾಹ ದುರಂತದಲ್ಲಿ, ಕರ್ನಾಟಕದ ಪ್ರವಾಸಿಗರು ನಾಪತ್ತೆಯಾಗಿದ್ದರೆ, ತಕ್ಷಣವೇ ವಿವರ ಒದಗಿಸುವಂತೆ, ರಾಜ್ಯ ಸರ್ಕಾರ ಸಾರ್ವಜನಿಕರನ್ನು ಕೋರಿದೆ.

<><><>

**ದಕ್ಷಿಣಕನ್ನಡ ಜಿಲ್ಲೆಯಲ್ಲಿ,** ಎಚ್ 1 ಎನ್ 1 ಸೋಂಕಿನ, 87 ಪ್ರಕರಣಗಳು ದಾಖಲಾಗಿವೆ ಎಂದು, ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ಎಚ್.ಆರ್.ತಿಮ್ಮಯ್ಯ ತಿಳಿಸಿದ್ದಾರೆ.

<><><>

**ಧಾರವಾಡ ರಂಗಾಯಣ ಘಟಕ,** ಇಂದಿನಿಂದ ಮೂರು ದಿನ, ಸಂಜೆ 6.30ಕ್ಕೆ, ಖ್ಯಾತ ಪ್ರಸಾದನ ಕಲಾವಿದ, ಗಜಾನನ ಮಹಾಲೆ ಸಂಸ್ಮರಣೆ, "ಶ್ರಾವಣ ರಂಗ ಸಂಭ್ರಮ" ನಾಟಕ ಪ್ರದರ್ಶನ ಆಯೋಜಿಸಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಗ್ರಾಮೀಣ ಜಲ ಆಸ್ತಿಗಳ** ವೈಜ್ಞಾನಿಕ ನಿರ್ವಹಣೆಗೆ, ಜಿ.ಐ.ಎಸ್. ಆಧಾರಿತ, ವೆಬ್ ಅಪ್ಲಿಕೇಷನ್, ಜಾರಿಗೆ.
- **ಎಲಿವೇಟ್ ಕರ್ನಾಟಕ** ಮತ್ತು ಲೀಪ್ ಯೋಜನೆ; ಕಲ್ಯಾಣ ಕರ್ನಾಟಕದ ಹದಿನೆಂಟು ನವೋದ್ಯಮಿಗಳಿಗೆ ಲಾಭ.

- **ವಿಜಯಪುರದ ‘ಮಡಗ್ಯಾಳ’ ಕುರಿಗೆ,** ರಾಷ್ಟ್ರೀಯ ತಳಿ ಮಾನ್ಯತೆ.
- **ಇಂದು, ಶ್ರಾವಣ ಮಾಸದ,** ನೂಲು ಹುಣ್ಣಿಮೆ; ‘ರಕ್ಷಾ ಬಂಧನ’ ಸಂಭ್ರಮ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**<><><>**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

**<><><>**